ಸಾಕ್ಷಿಯನ್ನು ದಿನಾಂಕಃ 29-05- 2024 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

18. ಚಾಸಾ-19 ರವರಿಗೆ ನೀಡಿದ ನೋಟೀಗೆ ಸದರಿ ನೋಟೀಸಿನಲ್ಲಿ ತನಗೆ ಶುಗರ್ ಮತ್ತು ಬಿ.ಪಿ ಇರುವುದರಿಂದ ಕೋವಿಯನ್ನು ತಾನು ಮೃತರಿಗೆ ನೀಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಉತ್ತರವನ್ನು ನೋಡುತ್ತಿದ್ದು , ಅದನ್ನು ನಿಪಿ-17 ಎಂದು ಗುರುತಿಸಲಾಯಿತು . ಸದರಿ ಕೋವಿಯನ್ನು ಪೊಲೀಸ್ ನಿರೀಕ್ಷಕರ ಆದೇಶದಂತೆ ಹೆಚ್.ಸಿ 1923 ರವರಿಗೆ ಚಾಸಾ-19 ರವರಿಗೆ ವಾಪಸ್ಸು ನೀಡಿ ರಶೀದಿ ಪಡೆದಿರುವುದಾಗಿ ನನ್ನಲ್ಲಿ ವರದಿ ಮಾಡಿರುತ್ತಾರೆ . ಸದರಿ ರಶೀದಿಯನ್ನು ನೋಡುತ್ತಿದ್ದು , ಅದನ್ನು ನಿಪಿ-18 ಎಂದು ಗುರುತಿಸಲಾಯಿತು . ಚಾಸಾ-19 ರವರನ್ನು ಸಾಕ್ಷಿದಾರರನ್ನಾಗಿ ಪರಿಗಣಿಸಿ ದಿಃ 09-04-2018 ರಂದು ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು .

19. ದಿಃ 12-04-2018 ರಂದು ಮೃತ ಗ್ರೇಷಿಯನ್ ಲೆಸ್ಲಿ ರೋಡ್ರಿಗಸ್ ಮತ್ತು ಪ್ರವೀಣ್ ತಾವ್ರೋ ರವರ ಪಿ.ಎಂ ವರದಿಯನ್ನು ಸ್ವೀಕರಿಸಿ, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ . ಸದರಿ ಪಿ.ಎಂ ವರದಿಯನ್ನು ನೋಡುತ್ತಿದ್ದು , ಅವುಗಳನ್ನು ನಿಪಿ-19 ಮತ್ತು ನಿಪಿ-20 ಎಂದು ಗುರುತಿಸಲಾಯಿತು . ದಿಃ 27-04-2018 ರಂದು ಘಟನಾ ಸ್ಥಳದಲ್ಲಿ ಹಾದು ಹೋಗುವ ವಿದ್ಯುತ್ ಸ್ಥಳದ ಉಸ್ತುವಾರಿಯನ್ನು ನೋಡಿಕೊಳ್ಳುವವರು ಯಾರು ಎನ್ನುವ ಬಗ್ಗೆ ದಿಃ 27-03-2018 ರಂದು ಮೆಸ್ಕಾಂ ಮೂಡಬಿದ್ರೆಗೆ ರವರಿಗೆ ವಿನಂತಿಸಿಕೊಂಡಿದ್ದು , ಅದಕ್ಕೆ ಚಾಸಾ-22 ಮೆಸ್ಕಾಂ , ಮೂಡಬಿದ್ರೆಯವರು ಚಾಸಾ-23 ಮತ್ತು ಚಾಸಾ-24 ರವರು ಕರ್ತವ್ಯದಲ್ಲಿ

ಇದ್ದ ಬಗ್ಗೆ ಅವರ ಹೆಸರು ಮತ್ತು ವಿಳಾಸವನ್ನು ನೀಡಿರುತ್ತಾರೆ . ಸದರಿ ದಾಖಲೆಯನ್ನು ಈಗ ನೋಡುತ್ತಿದ್ದು , ಅದನ್ನು ನಿಪಿ-21 ಎಂದು ಗುರುತಿಸಲಾಯಿತು .

20. ಸ್ವಾಧೀನ ಪಡಿಸಿಕೊಂಡ ಸ್ವತ್ತುಗಳನ್ನು ಪಿ.ಎಂ. ನಂ. 31/2019 ರಲ್ಲಿ ನಮೂದಿಸಿ, ಸ್ವತ್ತುಗಳಾದ ಐಟಂ ನಂ. 5 ರಿಂದ 7 ಮೊಬೈಲ್ ಗಳು ಹಾಗೂ ಕೆಎ-20 ಪಿ 2462 ಬೊಲೆರೋ ವಾಹನವನ್ನು ಮೃತ ಗ್ರೇಷಿಯನ್ ಲೆಸ್ಲಿ ರೋಡ್ರಿಗಸ್ ರವರ ಪತ್ನಿಗೆ ರಶೀದಿ ದಿಃ 18-09-2018 ರಂದು ಪಡೆದು ಬಿಟ್ಟುಕೊಟ್ಟಿರುತ್ತೇನೆ . ಸದರಿ ರಶೀದಿಯನ್ನು ನೋಡುತ್ತಿದ್ದು ಅದನ್ನು ನಿಪಿ-22 ಎಂದು ಗುರುತಿಸಲಾಯಿತು .

21. ದಿಃ 30-09-2018 ರಂದು ಅರಮನೆ ಸಂಕಪ್ಪ ಶೆಟ್ಟಿಯವರಿಗೆ ಸೇರಿದ ಗದ್ದೆಯು ಅರಣ್ಯ ಇಲಾಖೆಗೆ ಸೇರಿದೆಯೋ , ಅರಣ್ಯ ಇಲಾಖೆಗೆ ಸಂಬಂಧಿಸಿದ ಅಪರಾಧ ಪತ್ತೆ ಹಚ್ಚಲು ಅವರಿಂದ ಸಿಬ್ಬಂದಿ ನೇಮಕ ಮಾಡಲಾಗಿದೆಯೋ , ಅವರ ಹೆಸರು ಮತ್ತು ವಿಳಾಸವನ್ನು ನೀಡುವ ಬಗ್ಗೆ ಮಾಹಿತಿಯನ್ನು ಕೋರಿರುತ್ತೇವೆ . ದಿಃ 23-10-2018 ರಂದು ಮೆಸ್ಕಾಂ ಇಲಾಖೆಯ ಚಾಸಾ-22 ರಿಂದ 24 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ .

22. ದಿಃ 21-11-2018 ರಂದು ಆರೋಪಿ ಸುರೇಶ್ ಇವರು ಮಾನ್ಯ ಉಚ್ಚನ್ಯಾಯಾಲಯದಿಂದ ಜಾಮೀನು ಪಡೆದು ಮಧ್ಯಾಹ್ನ 1-30 ಗಂಟೆಗೆ ಠಾಣೆಗೆ ಹಾಜರಾಗಿದ್ದು , ಅವರ ವಿರುದ್ಧ ದಸ್ತಗಿರಿ ಕ್ರಮ ಕೈಗೊಂಡು ಹಾಗೂ ಅವರ ಸ್ವಖುಷಿ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ . ಸ್ವಖುಷಿ ಹೇಳಿಕೆಯಲ್ಲಿ ತಾವು ಕೃತ್ಯ ನಡೆದ ಸ್ಥಳದಲ್ಲಿ ವೈಯರುಗಳನ್ನು ವಿದ್ಯುತ್ ಇರುವ ಕಂಬಕ್ಕೆ ಕನೆಕ್ಟ್ ಮಾಡಿ ವೈಯರ್ ಮುಖಾಂತರ ಹರಿಬಿಟ್ಟ ಪ್ರಕ್ರಿಯೇ ಬಗ್ಗೆ ಹಾಗೂ ತನ್ನನ್ನು ಕರೆದುಕೊಂಡು ಹೋದರೆ ಘಟನಾ ಸ್ಥಳವನ್ನು ಹಾಗೂ ಕೃತ್ಯಕ್ಕೆ

ಬಳಸಿದ ಟೆಲಿಫೋನ್ ಕಂಪನಿಯ ಸ್ಕಿನ್ ಲೆಸ್ ವೈಯರುಗಳನ್ನು ಹಾಗೂ ಸಂಕಪ್ಪ ಶೆಟ್ಟಿಯ ಗದ್ದೆಗೆ ಕರೆಂಟ್ ಕನೆಕ್ಷನ್ ಕೊಡಲು ಉಪಯೋಗಿಸಿದ ಬಿಳಿ ಬಣ್ಣದ ಸರ್ವೀಸ್ ವಯರುಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ತನ್ನ ಮನೆಯ ಪಕ್ಕದ ಬಚ್ಚಲು ಮನೆಯ ಗೋಡೆಗೆ ನೇತುಹಾಕಿರುವುದನ್ನು ತೋರಿಸಿಕೊಡುವುದಾಗಿ ತನ್ನ ಸ್ವಖುಷಿ ಹೇಳಿಕೆಂತೆ ಚಾಸಾ-20 ಮತ್ತು ಚಾಸಾ-21 ರವರ ಸಮಕ್ಷಮ ಮಹಜರು ಮಾಡಿರುತ್ತೇನೆ . ಸದರಿ ಹೇಳಿಕೆಯನ್ನು ನೋಡುತ್ತಿದ್ದು , ಅದನ್ನು ನಿಪಿ-23 ಎಂದು ಸದರಿ ಭಾಗವನ್ನು ನಿಪಿ-23(ಎ) ಎಂದು ಗುರುಸಲಾಯಿತು . ಸದರಿ ಮಹಜರನ್ನು ಈಗ ನೋಡುತ್ತಿದ್ದು , ಅದನ್ನು ನಿಪಿ-24 ಎಂದು ಗುರುತಿಸಲಾಯಿತು . ( ದಿಃ 21-11-2018 ರಲ್ಲಿ ಆದ ನಿಪಿ-11 ರ ಮಹಜರನ್ನು ತಿದ್ದುಪಡಿ ಮಾಡಿ ನಿಪಿ-24 ಎಂದು ನಿಶಾನೆಗೊಳಿಸಲಾಗಿದೆ . ಹಾಗೂ ದಿಃ28-03-2018 ರಂದು ಆದ ಮಹಜರನ್ನು ನಿಪಿ-11 ಎಂದು ನಿಶಾನೆಗೊಳಿಸಲಾಗಿದೆ ).

23. 1 ನೇ ಆರೋಪಿ ಆತನ ಮನೆಯ ಬಚ್ಚಲು ಕೋಣೆಯಲ್ಲಿ ಇರುವ ಗೋಡೆಗೆ ನೇತುಹಾಕಿದ್ದ ಸಿಂಥೆಟಿಕ್ ಚೀಲದಲ್ಲಿ ಇದ್ದ ಬಿಳಿ ಬಣ್ಣದ ವೈರಗಳ ಕಟ್ಟುಗಳನ್ನು ಹಾಗೂ ಸ್ಕಿನ್ಲೆಸ್ ವೈರ್ ಗಳ ಕಟ್ಟನ್ನು ತೆಗೆದು ಇದೆ ಟೆಲಿಫೋನ್ ಕಂಪನಿಯವರ ಸ್ಕಿನ್ಲೆಸ್ ವೈರ್ ಗಳನ್ನು ತಾನು ಮತ್ತು ಶೇಖರ ಅರಮನೆ ಸಂಕಪ್ಪ ಶೆಟ್ಟಿಯವರ ಗದ್ದೆಯಲ್ಲಿ ಸಾಲಾಗಿ ನೆಟ್ಟ ಮರದ ಗೂಟಗಳಿಗೆ 2 ಅಂತರದಲ್ಲಿ ಕಟ್ಟಿ , ಅವುಗಳ ಎರಡೂ ತುದಿಗಳಿಗೆ ಇದೆ ಬಿಳಿ ಬಣ್ಣದ ಸರ್ವೀಸ್ ವೈಯರ್ ಗಳ ಮೂಲಕ ಅರಮನೆ ಸಂಕಪ್ಪ ಶೆಟ್ಟಿಯವರು ಗದೆಯ ಬಳಿಯಲ್ಲಿ ಇರುವ ಕರೆಂಟು ಕಂಬದಿಂದ ಕರೆಂಟನ್ನು ತೆಗೆದು ಕಾಡು ಪ್ರಾಣಿಗಳನ್ನು ಹಿಡಿಯಲು ಕನೆಕ್ಷನ್ ನೀಡಿಲು ಹೋಗಿದ್ದರು ಎಂಬುದಾಗಿ ತೋರಿಸಿಕೊಟ್ಟಿರುತ್ತಾರೆ .

ಸದರಿ ವೈಯರ್ ಮತ್ತು ಸಿಂಥಿಟಿಕ್ ಚೀಲಗಳನ್ನು ನೋಡುತ್ತಿದ್ದು, ಅವುಗಳನ್ನು ಮು.ಮಾ-14 ರಿಂದ ಮುಮಾ-17 ಎಂದು ಗುರುತಿಸಲಾಯಿತು. ಎಲ್ಲಾ ಸ್ವತ್ತುಗಳನ್ನು ಪ್ರತ್ಯೇಕವಾಗಿ ಪ್ಲಾಸ್ಟಿಕ್ ಚೀಲದಲ್ಲಿ ಸುತ್ತಿ , ಬಿಳಿ ಬಟ್ಟೆಯಲ್ಲಿ ಸುತ್ತಿ , ಅರಗುಸೀಲು ಇರುವ ಗುರುತಿನ ಚೀಟಿಯನ್ನು ಅಂಟಿಸಿರುತ್ತೇನೆ.

24. ನಂತರ ಆರೋಪಿತರು ಮುಂದುವರಿದು ನಮ್ಮನ್ನು ಅರಮನೆ ಸಂಕಪ್ಪ ಶೆಟ್ಟಿಯರ ಗದ್ದೆಗೆ ಕರೆದುಕೊಂಡು ಹೋಗಿದ್ದು , ಅಲ್ಲಿ ಪಕ್ಕದಲ್ಲಿ ಇರುವ ವಿದ್ಯುತ್ ಕಂಬದಿಂದ ತಾನು ಮತ್ತು ಶೇಖರನು ಸದರಿ ಸರ್ವೀಸ್ ವೈಯರ್ ಗಳ ಮೂಲಕ ಕರೆಂಟ್ ಕೆನೆಕ್ಷನ್ ಪಡೆದಿರುವುದಾಗಿ ತಿಳಿಸಿರುತ್ತಾರೆ . ಇದೇ ಗದ್ದೆಯಲ್ಲಿ ಸಾಲಾಗಿ ನೆಟ್ಟ ಮರದ ಗೂಟಗಳಿಗೆ 2 ಅಂತರದಲ್ಲಿ ಕಟ್ಟಿದ ಸ್ಕಿನ್ ಲೆಸ್ ವೈಯರುಗಳಿಗೆ ಕರೆಂಟ್ ಕನೆಕ್ಷನ್ ನೀಡಿ ಹೋಗಿದ್ದು , ಇದೇ ಸ್ಥಳದಲ್ಲಿ ಗ್ರೇಷಿಯನ್ ಲೆಸ್ಲಿ ರೋಡ್ರಿಗಸ್ ಮತ್ತು ಪ್ರವೀಣ್ ತಾವ್ರೋ ರವರು ಬಿದ್ದಿದ್ದನ್ನು ತೋರಿಸಿಕೊಟ್ಟಿರುತ್ತಾರೆ . ಮರದ ಗೂಟಗಳನ್ನು ನೆಟ್ಟ ಗುಂಡಿಗಳನ್ನೂ ಕೂಡ ತೋರಿಸಿರುತ್ತಾರೆ . ಈ ಮಾರ್ಗದಿಂದ ಮಧ್ಯಾನ 2-00 ರಿಂದ 3-00 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತೇವೆ. ನಂತರ ಚಾಸಾ-20 ಮತ್ತು ಚಾಸಾ-21 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ . ಚಾಸಾ-4 ರಿಂದ ಚಾಸಾ-18 ರವರ ಮರು ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ .

25. ದಿಃ 21-05-2018 ರಂದು ಸ್ಥಳದ ಡಿಪಾರ್ಮೆಂಟ್ ಆಫ್ ಫೊರೆನ್ಸಿಕ್ ರವರು ಸೀನ್ ಆಫ್ ಕ್ರೈಂ ಬಗ್ಗೆ ಭೇಟಿ ನೀಡಿದ ಬಗ್ಗೆ 5 ಪುಟಗಳುಳ್ಳ ವರದಿಯನ್ನು ನೀಡಿರುತ್ತಾರೆ . ಸದರಿ ವರದಿಯನ್ನು ನೋಡುತ್ತಿದ್ದು , ಅದನ್ನು ನಿಪಿ-25 ಎಂದು ಗುರುತಿಸಲಾಯಿತು . ದಿಃ 02-08-2018 ರಂದು ಈ ಪ್ರಕರಣದ ಯೂಡಿ ಆರ್ ನಲ್ಲಿ ಮಾನ್ಯ ಎ.ಸಿ ನ್ಯಾಯಾಲಯದಲ್ಲಿ

ನಿವೇದಿಸಿಕೊಂಡ ಯುಾ ಡಿ ಆರ್ ನಂ. 11/2018ರ ಪ್ರ.ವ.ವರದಿ ಯನ್ನು ಮತ್ತು 31/2018 ಹಾಗೂ 35/2018 ರಲ್ಲಿ ಇರುವಂತಹ ಸ್ವತ್ತುಗಳ ಸಮೇತ ಸ್ವತ್ತು ಪಟ್ಟಿಯನ್ನು , ಹಾಗೂ ನ್ಯಾಯಾಲಯಕ್ಕೆ ನಿವೇದಿಸಿಕೊಂಡ ಎಲ್ಲಾ ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಸ್ತಾಂತರಿಸಲು ವಿನಂತಿ ಪತ್ರವನ್ನು ನಿವೇದಿಸಿಕೊಂಡಿರುತ್ತೇನೆ

26. ದಿಃ 21-08-2018 ರಂದು ಪೊಲೀಸ್ ಠಾಣೆಗೆ ಹಸ್ತಾಂತರಿಸಿದ್ದು ಅದನ್ನು ನಾನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ . ಪಿ.ಎಂ. ವರದಿಯ ಅಂತಿಮ ವರದಿಯನ್ನು ತನಿಖಾ ಸಮಯದಲ್ಲಿ ಸ್ವೀಕರಿಸಿಕೊಂಡಿರುತ್ತೇನೆ . ಸದರಿ ಅಂತಿಮ ವರದಿಗಳನ್ನು ನೋಡುತ್ತಿದ್ದು , ಅವುಗಳನ್ನು ನಿಪಿ-26 ಮತ್ತು ನಿಪಿ-27 ಎಂದು ಗುರುತಿಸಲಾಯಿತು . ನನಗೆ ಮುಲ್ಕಿ ಪೊಲೀಸ್ ಠಾಣೆಗೆ ವರ್ಗಾವಣೆಯಾದ ಕಾರಣ ಕಡತವನ್ನು ಚಾಸಾ-31 ರವರಿಗೆ ಹಸ್ತಾಂತರಿಸಿರುತ್ತೇನೆ .

<u>ಪಾಟೀಸವಾಲಿಗಾಗಿ ಮುಂದೂಡಲಾಯಿತು .</u>

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ